ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯ
ಎ.ಡಿ.ಆರ್ ಕಟ್ಟಡ, ನ್ಯಾಯಾಲಯದ ಆವರಣದ ಪಕ್ಕ, ಮಂಡ್ಯ - 571401.
DISTRICT LEGAL SERVICES AUTHORITY, MANDYA.
A.D.R. Building, Next to District Court Complex, Mandya-571401.

Telephone: 08232-229 E-mail: dlsa.mandya@gmail.com

ಅಧಿಸೂಚನೆ ಸಂಖ್ಯೆ: ಪಿ.ಎಲ್.ವಿ /01/2025,

## ನೇಮಕಾತಿ ಪ್ರಕಟಣೆ ದಿನಾಂಕ: 18.09.2025

## ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯ ಹಾಗೂ ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳು

(ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ)

ಮಾನ್ಯ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರುರವರ ಪತ್ರ ಸಂಖ್ಯೆ:01/ಪಿ.ಎಲ್.ವಿ/2025/ ದಿನಾಂಕ:-12.09.2025 ಅನ್ವಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯ ಮತ್ತು ಮಂಡ್ಯ ಜಿಲ್ಲೆಯ ಇತರ 06 ತಾಲ್ಲೂಕುಗಳ ತಾಲ್ಲೂಕು ಕಾನೂನು ಸೇವೆಗಳ ಸಮಿತಿಯಲ್ಲಿ ಕಾರ್ಯ ನಿರ್ವಹಿಸಲು ಅರೆಕಾಲಿಕ ಕಾನೂನು ಸ್ವಯಂ ಸೇವಕರನ್ನು ನೇಮಕ ಮಾಡಿಕೊಳ್ಳಲು ಸೇವಾ ಮನೋಭಾವ ಹೊಂದಿರುವ ಅಭ್ಯರ್ಥಿಗಳನ್ನು ಈ ಪ್ರಕಟಣೆಯೊಂದಿಗೆ ಅಡಕವಾಗಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮೇಲೆ ಉಲ್ಲೇಖಿತ ಪತ್ರದನ್ವಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕನಿಷ್ಠ 50(100) ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಕನಿಷ್ಠ 25(50) ಅರೆಕಾಲಿಕ ಸ್ವಯಂ ಸೇವಕರನ್ನು ನೇಮಕ ಮಾಡಿಕೊಳ್ಳಲು ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಆದೇಶಿಸಿರುತ್ತದೆ.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ Para Legal Volunteer Scheme ನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಪ್ಯಾರಾ ಲೀಗಲ್ ವಾಲೆಂಟರ್ಸ್‌ಗಳನ್ನು ನೇಮಿಸಿಕೊಳ್ಳುವ ಸಂಬಂಧ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಪಡಿಸಲಾಗಿರುತ್ತದೆ. ಅದರಂತೆ ಕೆಳಕಂಡಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

1. ಶೈಕ್ಷಣಿಕ ಅರ್ಹತೆ:- ಕನಿಷ್ಠ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿರಬೇಕು. ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ ನೀಡಲಾಗುವುದು.

2. ಅರ್ಹತೆ:- ಶಿಕ್ಷಕರು(ನಿವೃತ್ತ ಶಿಕ್ಷಕರು ಸಹ), ನಿವೃತ್ತ ಸರ್ಕಾರಿ ನೌಕರರು, ಹಿರಿಯ ನಾಗರೀಕರು, ಎಂ.ಎಸ್.ಡಬ್ಲ್ಯೂ ಅಂಗನವಾಡಿ ಕಾರ್ಯಕರ್ತೆಯರು, ವೈದ್ಯರು ಮತ್ತು ಫಿಜಿಶಿಯನ್, ಕಾನೂನು ಪದವಿ ವಿದ್ಯಾರ್ಥಿಗಳು, ರಾಜಕೀಯೇತರ ಸದಸ್ಯರು, ಮಂಗಳಮುಖಿಯರು **(Other Genders)** ಸೇವಾನಿರತ ಎನ್.ಜಿ.ಓ.ಗಳು ವಿದ್ಯಾವಂತ ಮತ್ತು ಉತ್ತಮ ನಡತೆವುಳ್ಳ ಖೈದಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಅಭ್ಯರ್ಥಿಗಳು ಯಾವ ತಾಲ್ಲೂಕು ಕಾನೂನು ಸೇವಾ ಸಮಿತಿಗಳಿಗೆ ಅಥವಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲು ಬಯಸುತ್ತಾರೋ ಅಂತಹ ಜಿಲ್ಲಾ ಕೇಂದ್ರ/ತಾಲ್ಲೂಕಿನ ಖಾಯಂ ನಿವಾಸಿಗಳಾಗಿರತಕ್ಕದ್ದು.

3. ಸಂಭಾವನೆ:-ಯಾವುದೇ ನಿಗಧಿತ ಸಂಭಾವನೆ ಇರುವುದಿಲ್ಲ, ಆದರೆ ಸಾಮಾಜಿಕ ಸೇವಾ ಮನೋಭಾವ ಇರುವಂತಹ ಅಭ್ಯರ್ಥಿಗಳು ಪ್ರಾಧಿಕಾರದ ಕೆಲಸ ಕಾರ್ಯಗಳಲ್ಲಿ ಪಾಲ್ಗೊಂಡಾಗ ಪ್ರಾಧಿಕಾರ ನಿಗಧಿ ಪಡಿಸಿದ ಗೌರವಧನಕ್ಕೆ ಅರ್ಹರಿರುತ್ತಾರೆ._

4. ತರಬೇತಿ:- ಆಯ್ಕೆಯಾದ ಅಭ್ಯರ್ಥಿಗಳಿಗೆ ಪೂರ್ವಭಾವಿ ತರಬೇತಿ ಕಡ್ಡಾಯವಾಗಿರುತ್ತದೆ.

5. ಅರ್ಜಿ:- ಅರ್ಜಿ ಸಲ್ಲಿಸಲು ದಿನಾಂಕ: 19.09.2025 ರಿಂದ ಪ್ರಾರಂಭವಾಗಿ ದಿನಾಂಕ: 29.09.2025 ಕಡೆಯ ದಿನಾಂಕವಾಗಿರುತ್ತದೆ. (ಸಂಜೆ 05:00 ಗಂಟೆಯ ಒಳಗಾಗಿ ಅರ್ಜಿ ಸಲ್ಲಿಸತಕ್ಕದ್ದು)

6. ನೇಮಕಾತಿ ವಿಧಾನ:- ಅರ್ಹ ಅಭ್ಯರ್ಥಿಗಳಿಗೆ ನಿಗಧಿ ಪಡಿಸಿದ ದಿನಾಂಕ ಮತ್ತು ಸಮಯದಂದು ಮೌಖಿಕ ಸಂದರ್ಶನ ನಡೆಸಲಾಗುವುದು. ನೇಮಕಾತಿಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

7. ಅರ್ಜಿ ದೊರೆಯುವ ಸ್ಥಳ:- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯ ಮತ್ತು ಎಲ್ಲಾ ತಾಲ್ಲೂಕುಗಳ ತಾಲ್ಲೂಕು ಕಾನೂನು ಸೇವಾ ಸಮಿತಿಗಳ ಕಛೇರಿಯಲ್ಲಿ ದೊರೆಯುವುದು ಹಾಗೂ **Mandya District Court website** ನ **DLSA** ಲಿಂಕ್‌ನಲ್ಲೂ ಸಹ ಅರ್ಜಿಗಳನ್ನು ಅಪಲೋಡ್ ಮಾಡಲಾಗಿರುತ್ತದೆ.

8. ಅರ್ಜಿ ಸಲ್ಲಿಸುವ ವಿಧಾನ:- ನಿಗಧಿಪಡಿಸಿದ ನಮೂನೆಯಲ್ಲಿ ಭರ್ತಿಯಾದ ಅರ್ಜಿಗಳನ್ನು ನಿಗಧಿತ ಸಮಯದ ಒಳಗೆ ಸಂಬಂಧಪಟ್ಟ ಪ್ರಾಧಿಕಾರ/ಸಮಿತಿಯ ಕಛೇರಿಯಲ್ಲಿ ಸಲ್ಲಿಸುವುದು.

### ಅರ್ಜಿ ಸಲ್ಲಿಸಬೇಕಾದ ವಿಳಾಸ:

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯಕ್ಕೆ ಅರ್ಜಿ ಸಲ್ಲಿಸಲು

1. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಂಡ್ಯ.
ಎ.ಡಿ.ಆರ್.ಕಟ್ಟಡ ನ್ಯಾಯಾಲಯದ ಸಂಕೀರ್ಣ,
ಮಂಡ್ಯ.

ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಿಗೆ ಅರ್ಜಿ ಸಲ್ಲಿಸಲು

2. ತಾಲ್ಲೂಕು ಕಾನೂನು ಸೇವೆಗಳ ಸಮಿತಿ,
ನ್ಯಾಯಾಲಯ ಸಂಕೀರ್ಣ ಮದ್ದೂರು/ಮಳವಳ್ಳಿ/
ಪಾಂಡವಪುರ ಕೆ.ಆರ್.ಪೇಟೆ/ನಾಗಮಂಗಲ/ಶ್ರೀರಂಗಪಟ್ಟಣ.

ಅರ್ಹ ಅಭ್ಯರ್ಥಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ಸಂಬಂಧಪಟ್ಟ ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಹಾಗೂ ವೆಬ್ ಸೈಟ್‌ನಲ್ಲೂ ದೊರೆಯುವ ಅರ್ಜಿಗಳನ್ನು ಪಡೆದು ತಮ್ಮ ಸ್ವ ವಿವರಗಳನ್ನು ನಮೂದಿಸಿ ಮೇಲೆ ಹೇಳಿದ ವಿಳಾಸಗಳಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ತಮ್ಮ ಸ್ವ ವಿಳಾಸವಿರುವ ಅರ್ಜಿಯ ಜೊತೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು.

ಸಹಿ/-
I/C ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಮಂಡ್ಯ.

ಆಯ್ಕೆ ಸಮಿತಿಯ ಆದೇಶದ ಮೇರೆಗೆ

# ಅರೆಕಾಲಿಕ ಕಾನೂನು ಸ್ವಯಂ ಸೇವಕರುಗಳ ನೇಮಕಾತಿಗಾಗಿ ಅರ್ಜಿ.

ಪಾಸ್‌ಪೋರ್ಟ್ ಸೈಜ್ ಫೋಟೋ

ಗೆ,

ಅಧ್ಯಕ್ಷರು/ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ/ತಾಲ್ಲೂಕು ಕಾನೂನು ಸೇವಾ ಸಮಿತಿ
ಮಂಡ್ಯ ಜಿಲ್ಲೆ.

| | | |
|---|---|---|
| 1. | ಅರ್ಜಿದಾರರ ಹೆಸರು | |
| 2. | ತಂದೆ/ಗಂಡನ ಹೆಸರು | |
| 3. | ಲಿಂಗ | |
| 4. | ಪ್ರಸ್ತುತ ವಿಳಾಸಃ | |
| 5. | ಖಾಯಂ ವಿಳಾಸಃ | |
| 6. | ಮೊಬೈಲ್ ದೂರವಾಣಿ ಸಂಖ್ಯೆ/ಮೇಲ್ ಐಡಿ | |
| 7. | ವಿದ್ಯಾರ್ಹತೆ | |
| 8. | ಪ್ರಸ್ತುತ ನಿರ್ವಹಿಸುತ್ತಿರುವ ಉದ್ಯೋಗ | |
| 9. | ಕಾರ್ಯ ನಿರ್ವಹಿಸಲು ಇಚ್ಚಿಸುವ ಪ್ರದೇಶ (ಒಂದನ್ನು ಆಯ್ಕೆ ಮಾಡುವುದು) | ಜಿಲ್ಲೆ :<br>ತಾಲ್ಲೂಕು :<br>ಗ್ರಾಮಾಂತರ ಪ್ರದೇಶ : |
| 10. | ಈ ಹಿಂದೆ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದಲ್ಲಿ ಅದರ ವಿವರಗಳನ್ನು ನಮೂದಿಸುವುದು. | |
| 11. | ಇತರೆ | |

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳನ್ನು ತಿಳಿದಿದ್ದು, ಅವುಗಳಿಗೆ ಬದ್ಧವಾಗಿ ಅರ್ಪಣ ಮನೋಭಾವ ದಿಂದ ಸೇವೆ ಸಲ್ಲಿಸಲು ಇಚ್ಛಿಸಿ ಅರ್ಜಿ ಸಲ್ಲಿಸುತ್ತಿದ್ದೇನೆ.

ಸ್ಥಳಃ

ದಿನಾಂಕಃ

ಅರ್ಜಿದಾರರ ಸಹಿ